ಎಲ್ಲಾ ಸಮಸ್ಯೆಗಳು ಬಗೆಹರಿದರೆ ಮುಂದಿನ ಐದಾರು ತಿಂಗಳುಗಳಲ್ಲಿ ಎಲ್ಲವೂ ಸರಿಹೋಗುತ್ತದೆ.

ಶ್ರೀ ಕೆ.ಷಡಕ್ಷರಿ: ಇನ್ನು ಮುಂದೆ ಅವರು ಸ್ಟೇಟ್ ಟೆಂಡರ್ ಬಿಟ್ಟು, ತಾಲ್ಲೂಕು ಲೆವೆಲ್ ಟೆಂಡರ್ ಕೊಡಬೇಕು. ಜಿಲ್ಲಾವಾರು ನೀಡಿದರೂ ಪರವಾಗಿಲ್ಲ.

ಅಧ್ಯಕ್ಷರು: ಶ್ರೀ ಮುನಿರತ್ನ . . . ಇಲ್ಲ . . . ಶ್ರೀ ನಾಗೇಂದ್ರ ಅವರೇ ನಿಮ್ಮ ಪ್ರಶ್ನೆಗೆ ಏಳು ದಿನಗಳ ಕಾಲಾವಕಾಶ ಕೇಳಿದ್ದಾರೆ. ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು.

(1553), ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ)

ಅ) 2011–12, 2012–13 ಹಾಗೂ 2013–14ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭಗೊಂಡ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು;(ವಿವರ ನೀಡುವುದು)

ಆ) ಈ ಪೈಕಿ ಸ್ವಂತ ನಿವೇಶನ ಮತ್ತು ಸ್ವಂತ ಕಟ್ಟಡ ಹೊಂದಿರುವ ಕಾಲೇಜುಗಳು ಎಷ್ಟು; (ವಿವರ ನೀಡುವುದು)

ಇ) ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಹೊಸದಾಗಿ ಪ್ರಾರಂಭಗೊಂಡ ಮಾರಿಗುಡಿ ಪದವಿ ಪೂರ್ವ ಕಾಲೇಜಿನ ನಿವೇಶನ ಮಂಜೂರಾತಿ ಯಾವ ಹಂತದಲ್ಲಿದೆ; ಕಟ್ಟಡನಿರ್ಮಾಣಕ್ಕೆ ಮಂಜೂರಾದ ಹಣಎಷ್ಟು.

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಈ ಸಾಲುಗಳಲ್ಲಿ ಯಾವುದೇ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಿರುವುದಿಲ್ಲ.

2012–13ನೇ ಸಾಲಿನಲ್ಲಿ ಕಾರವಾರ, ಕುಮಟ, ಅಂಕೋಲಾ ಈ ಮೂರು ಹಾಗೂ 2013–14ನೇ ಸಾಲಿನಲ್ಲಿ ಭಟ್ಕಳ, ಮಂಕಿ ಈ ಎರಡು ಸ್ಥಳಗಳಲ್ಲಿ ಖಾಸಗಿ ಶಾಶ್ವತ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲಾಗಿದೆ.

ಆದರೆ 2011–12ನೇ ಸಾಲಿನಲ್ಲಿ ಯಾದಗಿರಿ ಜಿಲ್ಲೆಯ ವಡಗೇರದಿಂದ ಶಿರಸಿ ತಾಲ್ಲೂಕಿನ ಮಾರಿಗುಡಿ ಇಲ್ಲಿಗೆ, 2012–13ನೇ ಸಾಲಿನಲ್ಲಿ ಶಿರಸಿ ತಾಲ್ಲೂಕಿನ ಗೋಳಿಯಿಂದ ಸಿದ್ದಾಪುರ ತಾಲ್ಲೂಕಿನ ಹೆಗ್ಗರಣಿಗೆ, 2013–14ನೇ ಸಾಲಿನಲ್ಲಿ ಜೋಯಿಡ ತಾಲ್ಲೂಕಿನ ಉಳುವಿಯಿಂದ ಸಿದ್ದಾಪುರ ತಾಲ್ಲೂಕಿನ ಕಾನಗೋಡು ಇಲ್ಲಿಗೆ ಹಾಗೂ ಇದೇ ಕಾಲೇಜನ್ನು ಕಾನಗೋಡಿನಿಂದ ಜೋಯಿಡಾ ತಾಲ್ಲೂಕಿನ ಕುಂಬರವಾಡ ಇಲ್ಲಿಗೆ ಸ್ಥಳಾಂತರಗೊಂಡಿರುತ್ತದೆ.

ಆ) ಮಾರಿಗುಡಿ, ಶಿರಸಿ ಹಾಗೂ ಕುಂಬರವಾಡ ಕಾಲೇಜುಗಳಿಗೆ ನಿವೇಶನ ಲಭ್ಯವಾಗದ ಕಾರಣ ಅರಣ್ಯ ಭೂಮಿಯ ಮಂಜೂರಾತಿಗಾಗಿ ಅರಣ್ಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಹೆಗ್ಗರಣಿ, ಉತ್ತರ ಕನ್ನಡ ಜಿಲ್ಲೆ ಇಲ್ಲಿಗೆ ಕಂದಾಯ ಭೂಮಿಯು ಲಭ್ಯವಾಗಿರುತ್ತದೆ.

ಸರ್ಕಾರಿ ಪ.ಪೂ.ಕಾಲೇಜು, ಹೆಗ್ಗರಣಿ ` 25.00 ಲಕ್ಷ ಮತ್ತು ಮಾರಿಗುಡಿ ಕಾಲೇಜಿಗೆ ` 50.00 ಲಕ್ಷಗಳನ್ನು ಕಟ್ಟಡ ನಿರ್ಮಿಸುವ ಸಂಬಂಧ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ತೇವಣಿಸಲಾಗಿದೆ ಮತ್ತು ಆರ್.ಐ.ಡಿ.ಎಫ್.–19ರ ಯೋಜನೆಯಡಿಯಲ್ಲಿ 04 ಕೊಠಡಿ ಹಾಗೂ 08 ಶೌಚಾಲಯಗಳನ್ನು ನಿರ್ಮಿಸಲು ಅನುಮತಿಸಲಾಗಿದೆ.

ಇ) ಸರ್ಕಾರಿ ಪದವಿ ಪೂರ್ವ ಕಾಲೇಜು, ಶಿವಾಜಿ ಚೌಕ ಹತ್ತಿರ, ಮಾರಿಗುಡಿ ಈ ಕಾಲೇಜಿಗೆ ನಿವೇಶನ ಲಭ್ಯವಿಲ್ಲದ ಕಾರಣ ಅರಣ್ಯ ಇಲಾಖೆಗೆ ಭೂಮಿ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಕಾಲೇಜಿನ ಕಟ್ಟಡ ನಿರ್ಮಾಣ ಸಂಬಂಧ ` 50.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳಿಗೆ ತೇವಣಿಸಲಾಗಿದೆ. ಅಲ್ಲದೆ ನಬಾರ್ಡ್

ಸಹಯೋಗದ ಆರ್.ಐ.ಡಿ.ಎಫ್.–19ರ ಯೋಜನೆಯಡಿಯಲ್ಲಿ 04 ಕೊಠಡಿ ಮತ್ತು 08 ಶೌಚಾಲಯಗಳನ್ನು ನಿರ್ಮಿಸಲು ಅನುಮತಿಸಲಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಈ ಸಮಸ್ಯೆ ನೇರವಾಗಿ ಶಿಕ್ಷಣ ಇಲಾಖೆಗೆ ಬರುವುದಿಲ್ಲ. ತಾವು ಕೂಡ ಇದನ್ನು ಗಮನಿಸಬೇಕು. ಶಿಕ್ಷಣ ಇಲಾಖೆಯಿಂದ ಮಂಜೂರಾಗಿರುವಂತಹ ಕಟ್ಟಡಗಳು ಇಡೀ ರಾಜ್ಯದಲ್ಲಿವೆ. ಆದರೆ ಅವುಗಳು ಪ್ರಾರಂಭವಾಗುವುದಕ್ಕೆ ಸ್ಥಳಾವಕಾಶ ಸಿಗುತ್ತಿಲ್ಲ. ಕಳೆದ ಎರಡು ವರ್ಷಗಳಿಂದ ಆ ಸ್ಥಳಾವಕಾಶಗಳ ಬಗ್ಗೆ ಅರಣ್ಯ ಇಲಾಖೆ, ಅರಣ್ಯ ಭವನ ಮತ್ತು CFO ಅವರುಗಳ ಹತ್ತಿರ ಫೈಲ್‌ಗಳು ಅಡ್ಡಾಡುತ್ತಿವೆ. ಬೆಂಗಳೂರಿನ ಕೋರಮಂಗಲದ ಅರಣ್ಯಭವನದ ಹತ್ತಿರ ಹೋಗಿದ್ದೆ.

ಅಧ್ಯಕ್ಷರು: ಅದರ ಬಗ್ಗೆ ನಾನು ಹೇಳುವುದೇನೆಂದರೆ ಆ ಕಡತಗಳು ಅಲ್ಲಿ ಹೋದ ನಂತರ ಅವು ಅಲ್ಲೇ ನೇತಾಕಿಕೊಂಡು ಸಾಯುತ್ತವೆಯೇ ಹೊರತು ವಾಪಸ್ಸು ಬರುವುದಿಲ್ಲ ಬಿಟ್ಟು ಬಿಡಿ. ಆದರೆ ಅರಣ್ಯ ಜಮೀನಾದರೆ ನಿಮ್ಮ ಪಾರಂಪರಿಕ ಅರಣ್ಯ ಕಾನೂನೇನಿದೆ, ಅದರ ಪ್ರಕಾರ ಅರಣ್ಯ ಸಮಿತಿಗೆ ನೀವು ಕಾಲೇಜಿನವರಿಂದಲೇ ಅರ್ಜಿ ಕೊಟ್ಟು ಇಷ್ಟು ಎಂದು ಬಿಡುಗಡೆ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಅದನ್ನು ಸಹ ಮಾಡಿದ್ದೇವೆ. ಅರ್ಜಿಯನ್ನು ಸಹ ಭರ್ತಿ ಮಾಡಿದ್ದೇವೆ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದ ಸಂದರ್ಭದಲ್ಲಿಯೇ ಶಿಕ್ಷಣ ಇಲಾಖೆಯಿಂದ ಹಣ ಮಂಜೂರಾಗಿರುವುದು. ಆದರೆ ಆ ಸಂದರ್ಭದಲ್ಲಿ ಮಂಜೂರಾಗಿರುವ ಹಣಕ್ಕೆ ಜಾಗದ ಸಲುವಾಗಿ ಎಷ್ಟು ವರ್ಷ ಅಡ್ಡಾಡುತ್ತದೆ? ಆದ್ದರಿಂದ ನಾನೂ ಇನ್ನೂ ಒಂದು ಸಾರಿ ಈ ಪ್ರಶ್ನೆಯನ್ನು ಕೇಳಿದೆ. ಅದಕ್ಕೆ ಮಾನ್ಯ ಅರಣ್ಯ ಸಚಿವರು ಸೂಕ್ತ ನಿರ್ದೇಶನವನ್ನು ಕೊಡುತ್ತೇನೆ, Government to Government, Private ಆಗಿದ್ದರೆ ಬೇಗ ಆಗುತ್ತಿತ್ತು.

ಅಧ್ಯಕ್ಷರು: ಅರಣ್ಯ ಇಲಾಖೆ ಒಂದು super power ಆಗಿದೆ. ಅವರು ಮಾತನಾಡಿದರೆ ಸುಪ್ರೀಂ ಕೋರ್ಟ್ ಎಂದು ಹೇಳುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಸರ್ಕಾರದ್ದೇ ಜಾಗ. ಪಕ್ಕದಲ್ಲೇ ಡಿಗ್ರಿ ಕಾಲೇಜಿಗೆ ಸ್ಥಳ ಕೊಟ್ಟಿದ್ದಾರೆ. ಎರಡು ಎಕರೆ ಜಾಗವನ್ನು ಜೂನಿಯರ್ ಕಾಲೇಜಿಗೆ ಕೊಟ್ಟಿದ್ದಾರೆ.

ಅಧ್ಯಕ್ಷರು: ತಕ್ಷಣ ಆಗುವದರ ಬಗ್ಗೆ ನನಗೆ ಅನುಮಾನವಿದೆ. ಏಕೆಂದರೆ ನಮ್ಮಲ್ಲಿ ಕೂಡ ಒಂದು ಬ್ರಿಡ್ಜ್ ಮಂಜೂರಾಗಿದೆ. ಅದಕ್ಕಾಗಿ ಒಂದು ಎಕರೆ ಜಾಗವನ್ನು ತೆಗೆದುಕೊಳ್ಳೋಣವೆಂದರೆ ಅದಕ್ಕೆ ಪರ್ಯಾಯವಾಗಿ 3–4 ಎಕರೆ ಜಾಗವನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ನಾನೇ ಪಿ.ಸಿ.ಸಿ.ಎಫ್. ಅವರಿಗೆ ದೂರವಾಣಿ ಮುಖಾಂತರ ಹೇಳಿದ್ದೇನೆ. ಏನೂ ಆಗಿಲ್ಲ. ಇದಕ್ಕೆ ಪರಿಹಾರ ಏನೆಂದರೆ ಪಾರಂಪರಿಕ ಅರಣ್ಯಕ್ಕೆ ಅರ್ಜಿ ಹಾಕಿಕೊಳ್ಳಿ, ಅದರಲ್ಲಿ ತಕ್ಷಣ ಕೊಡುವುದಕ್ಕೆ ಅವಕಾಶವಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಲ್ಲಿ ಆ ರೀತಿ ಆಗುವುದಿಲ್ಲ. ಏಕೆಂದರೆ ಅರಣ್ಯ ಭವನದಿಂದ ಮಂಜೂರಾಗಿ ಬಾರದ ಹೊರತು ಅವರು ಕೊಡುವುದಿಲ್ಲ.

ಅಧ್ಯಕ್ಷರು: ಆ ರೀತಿ ಇಲ್ಲ. ಎಲ್ಲವೂ ಅಲ್ಲೇ. ಅಲ್ಲಿಯೇ ಸಬ್–ಡಿವಿಷನ್ ಕಮಿಟಿಗೆ ಹೋಗುತ್ತದೆ, ಡಿಸಿ ಕಮಿಟಿಗೆ ಹೋಗುತ್ತದೆ ನಂತರ hand over ಮಾಡುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: 300 ಹುಡುಗರು ಕಾಲೇಜಿನಲ್ಲಿ ಓದುತ್ತಿದ್ದು 85–90% ಒಳ್ಳೆಯ ಪರೀಕ್ಷಾ ಫಲಿತಾಂಶ ಬರುತ್ತಿದೆ. ಅರಣ್ಯ ಇಲಾಖೆಗೆ ಮಾನ್ಯ ಮುಖ್ಯ ಮಂತ್ರಿಯವರು ಹೇಳಬೇಕು. ಇದರ ಬಗ್ಗೆ ಮಾನ್ಯ ಅರಣ್ಯ ಸಚಿವರು ಹೇಳಾಯಿತು. Government to Government. ಸರ್ಕಾರವು ಹೈಸ್ಕೂಲು ಮತ್ತು ಜೂನಿಯರ್ ಕಾಲೇಜಿಗೆ ಜಾಗ ಕೊಡಬೇಕು.

ಅಧ್ಯಕ್ಷರು: Government to Government ಅಲ್ಲ. ಒಂದೇ Government. ಅರಣ್ಯ ಇಲಾಖೆಯೇನು ಬೇರೆ ಸರ್ಕಾರದ್ದೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: Department handover ಮಾಡುವುದು, ಶಿಕ್ಷಣ ಇಲಾಖೆಯಯವರು ಏನು ಹೇಳುತ್ತಾರೋ . . . . .

ಶ್ರೀ ಕೆ.ಜಿ.ಬೋಪಯ್ಯ: ಜೂನಿಯರ್ ಕಾಲೇಜ್ ಮಂಜೂರಾಗಿದೆ. ಸ್ಥಳದ ಪ್ರಸ್ತಾವನೆ ಸಹ ಆಗಿದೆ. ಕಳೆದ ಎರಡು ವರ್ಷಗಳಿಂದ ಸಮಸ್ಯೆಯಾಗಿದೆ.

ಶ್ರೀ ಸಿದ್ದರಾಮಯ್ಯ: ನಾವು ಹೇಳಿದ ಹಾಗೆ ಕೇಳಲೇಬೇಕು. ನಿಯಮಾವಳಿಗಳ ಪ್ರಕಾರ ಇದ್ದರೆ ಕೇಳಲೇಬೇಕು. ಸುಪ್ರೀಂಕೋರ್ಟ್ judgement ಇದ್ದರೆ ಅದನ್ನು ಮಧ್ಯದಲ್ಲಿ ತರಬಹುದು. ಆ ರೀತಿಯಲ್ಲಿ ಮಾಡುವುದಕ್ಕಾಗುವುದಿಲ್ಲ. ಬೋಪಯ್ಯನವರೇ ತಾವು ವಕೀಲರಾಗಿ, ಕಾನೂನೆಲ್ಲಾ ಓದಿಕೊಂಡು ಈ ರೀತಿ ಎಲ್ಲಾ ಮಾತನಾಡಬಾರದು. Constitution ಎಲ್ಲವನ್ನು ಓದಿ ಹೀಗೆ ಹೇಳಿದರೆ ಹೇಗೆ?

ಶ್ರೀ ಕೆ.ಜಿ.ಬೋಪಯ್ಯ: Misinterpretation ಮಾಡುತ್ತಾರೆ. ನಾನು ಅರಣ್ಯ ಇಲಾಖೆಯ ಚರ್ಚೆಯ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು: ಸಮಸ್ಯೆ ಬಗೆಹರಿಯುವುದಕ್ಕೆ ಸಲಹೆ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸರ್ಕಾರದ ಯಾವುದೇ ಆಸ್ಪತ್ರೆ, ಶಾಲೆ, ಕಾಲೇಜುಗಳನ್ನು ಕಟ್ಟುವುದಕ್ಕೆ ಬಂದಿರುವಂತಹ ಪ್ರಸ್ತಾವನೆಗಳನ್ನು ಕಾಲಮಿತಿಯೊಳಗೆ ಅದನ್ನು ಕ್ಲಿಯರ್ ಮಾಡುವುದಕ್ಕೆ ಸರ್ಕಾರವು ಸೂಕ್ತ ನಿರ್ದೇಶನವನ್ನು ನೀಡಬೇಕು. ಏಕೆಂದರೆ ಅರಣ್ಯ ಇಲಾಖೆಯು ಬಿಳಿ ಆನೆ ಇದ್ದ ಹಾಗೆ, ಅದು ಬೇಗನೆ ಎಚ್ಚರಿಕೆಯಾಗುವುದಿಲ್ಲ. ಕಳೆದ ಎರಡು ವರ್ಷಗಳಿಂದ ವೈಯಕ್ತಿಕವಾಗಿ ಗುದ್ದಾಡುತ್ತಿದ್ದೇನೆ. ಅಧಿವೇಶನದಲ್ಲಿ ಮಾನ್ಯ ಅರಣ್ಯ ಸಚಿವರು ಮಾಡಿಸುತ್ತೇನೆಂದು ಹೇಳಿದರು. ಅರಣ್ಯ ಇಲಾಖೆಯು ಜಡ್ಡುಗಟ್ಟಿ ಹೋಗಿದೆ. ಜನರಿಂದ ದೂರವಾಗಿದೆ. ನೀವು ಅವರಿಗೆ ಬಿಸಿ ಮುಟ್ಟಿಸದೇ ಹೋದರೆ ಕಷ್ಟವಾಗುತ್ತದೆ. ಅದು ಸರ್ಕಾರಿ ಕಾಲೇಜು ಹುಡುಗರು ಸಾಯುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: ನಾವು ಬಿಸಿ ಮುಟ್ಟಿಸುವ ಕೆಲಸ ಮಾಡುತ್ತೇವೆ. ನೀವು ಏಕೆ ಬಿಸಿ ಮುಟ್ಟಿಸಲಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನೀವು ಈ ರೀತಿ ಪ್ರಶ್ನೆ ಕೇಳುತ್ತಿದ್ದರೆ ಮಲಗಿಕೊಳ್ಳುವವರಿಗೆ ಹಾಸಿಗೆ ಹಾಕಿಕೊಟ್ಟಂತಾಗುತ್ತದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮುಖ್ಯ ಮಂತ್ರಿಯಾದವರು ನೀವು ಏಕೆ ಈ ರೀತಿ ಮಾಡಿಲ್ಲ ಎನ್ನುವುದೆಲ್ಲ ಕೇಳುವುದು ಸರಿಯಿಲ್ಲ. ಈ ರೀತಿಯ ಉತ್ತರ ತಮ್ಮಿಂದ ನಿರೀಕ್ಷೆ ಮಾಡಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅವರು ಏನು ಹೇಳಿದ್ದಾರೆ ಅದಕ್ಕೆ ನಾನು ಸೀರಿಯಸ್ ಆಗಿ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನೀವು ಮಾಡುವುದಿಲ್ಲ, ನಾವು ಮಾಡುವುದಿಲ್ಲ.

(ಗೊಂದಲ)

ಶ್ರೀ ಕೆ.ಶಿವಮೂರ್ತಿ: ಕಾಗೇರಿಯವರು ಶಿಕ್ಷಣ ಸಚಿವರಾಗಿದ್ದಾಗ 35 ವರ್ಷಗಳಿಂದ ನಡೆದುಕೊಂಡು ಬಂದಿರುವಂತಹ ಶಾಲೆಗಳನ್ನು ಒಂದೇ stroke ನಲ್ಲಿ ಮಚ್ಚಿಸಿಬಿಟ್ಟರು.

ಅಧ್ಯಕ್ಷರು: ಸಾಕು ಬಿಡಿ. ಅವರು ಹೇಳಿರುವುದು ಒಂದು ಭಾಗ ಎರಡನೇ ಭಾಗದಲ್ಲಿ ನಾನು ಹೇಳಿರುವ ಸಲಹೆಗಳನ್ನು ಸಹ ತೆಗೆದುಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈ ರೀತಿ ಕೆಲಸಗಳು ಮಾಡುವಾಗ ನಿರ್ದೇಶನಗಳು ಬೇಕು ಎನ್ನುವುದು ನಮ್ಮ ಅಪೇಕ್ಷೆ.

ಅಧ್ಯಕ್ಷರು: It is a fact also. Chief Conservator of Forest ಅವರಿಗೆ ಹೇಳಬೇಕು.

ಶ್ರೀ ಸಿದ್ದರಾಮಯ್ಯ: Totally agree with you. ನೀವು ಹೇಳಿದ ಹಾಗೆ ಹೇಳುತ್ತೇನೆ.

(1852), ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು)

ಅ) ಬೈಂದೂರು ಪದವಿ ಪೂರ್ವ ಕಾಲೇಜಿನಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ವಿಭಾಗವಾರು ವಿವರ ನೀಡುವುದು);

ಆ) ಈ ಕಾಲೇಜಿಗೆ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು;

ಇ) ಉಪನ್ಯಾಸಕರ ಹೆಚ್ಚುವರಿ ಹುದ್ದೆಗಳ ಅವಶ್ಯಕತೆ ಮತ್ತು ಹೆಚ್ಚುವರಿ ಕೊಠಡಿಗಳ ಕೊರತೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಈ) ಉಪನ್ಯಾಸಕರ ಹೆಚ್ಚುವರಿ ಹುದ್ದೆಗಳ ಭರ್ತಿಗೆ ಮತ್ತು ಹೆಚ್ಚುವರಿ ಕೊಠಡಿಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) 2014–15ನೇ ಶೈಕ್ಷಣಿಕ ವರ್ಷದಲ್ಲಿ ಪ್ರಥಮ ಹಾಗೂ ದ್ವಿತೀಯ ಪಿಯುಸಿಯಲ್ಲಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಸಂಯೋಜನೆಯಲ್ಲಿ ಒಟ್ಟು 1009 ವಿದ್ಯಾರ್ಥಿಗಳು ದಾಖಲಾಗಿದ್ದು, ವಿವರ ಈ ಕೆಳಕಂಡಂತಿರುತ್ತದೆ:

ಕ್ರ. ಸಂ.	ಸಂಯೋಜನೆ	ಪ್ರಥಮ ಪಿಯುಸಿ	ದ್ವಿತೀಯ ಪಿಯುಸಿ	ಒಟ್ಟು
1	ಹೆಚ್.ಇ.ಪಿ.ಎಸ್.	70	59	129
2	ಹೆಚ್.ಇ.ಬಿ.ಎ.	195	183	378